ಸಹಪಾಠಿಯನ್ನು ಆಶ್ರಮಕ್ಕೆ ಹೊತ್ತು ನಡೆದರು. ಅವನಿಗೆ ಉಪಚಾರ ಮಾಡಿದ ಬಳಿಕ ಎಚ್ಚರಗೊಂಡ. ಶಿಷ್ಯರೆಲ್ಲರೂ ಗುರುಗಳಿಗೆ ನಡೆದ ಅಷ್ಟೂ ಸಂಗತಿಯನ್ನು ವಿವರಿಸಿದರು. ಆಗ ಗುರುಗಳು ಆ ಶಿಷ್ಯನನ್ನು 'ಹೀಗೇಕೆ ಮಾಡಿದೆ ಮಗು?' ಎಂದು ಕೇಳಿದರು.

'ಗುರುಗಳೇ, ಎಲ್ಲೆಲ್ಲೂ ಎಲ್ಲದರಲ್ಲೂ ದೇವರಿದ್ದಾನೆ ಎಂದು ನೀವೇ ಇಂದು ಉಪದೇಶಿಸಿದಿರಿ. ಎಲ್ಲೆಲ್ಲೂ ಇರಬಲ್ಲ ದೇವರು ಆನೆಯಲ್ಲಿಯೂ ಇರಲೇ ಬೇಕಲ್ಲವೆ? ಹೀಗಾಗಿ ನಾನೂ ದೇವರೂ ಆನೆಯೂ ದೇವರು; ದೇವರು ದೇವರಿಗೆ ಏನು ತಾನೆ ಅಪಾಯ ಮಾಡುತ್ತಾನೆ – ಎಂದು ತಿಳಿದು ಅಲ್ಲೇ ನಿಂತೆ. ಅದು ತಪ್ಪೇ ಗುರುಗಳೇ' ಎಂದು ದೈನ್ಯದಿಂದ ಗುರುಗಳನ್ನು ಪ್ರಶ್ನಿಸಿದ ಶಿಷ್ಯ.

ಆಗ ಗುರುಗಳು, 'ಮಗು, ನೀನು ಹೇಳಿದ್ದು ಸತ್ಯವೇ ಸರಿ! ಆದರೆ ನೀನು ಆನೆಯಲ್ಲಿ, ನಿನ್ನಲ್ಲಿ ಇರುವ ದೇವರ ಬಗ್ಗೆ ಮಾತ್ರ ಯೋಚಿಸಿದೆ; ಆ ಮಾವುತನಲ್ಲೂ ದೇವರಿದ್ದಾನಲ್ಲವೆ? ಅವನು ನಿನಗೆ ಎಚ್ಚರಿಕೆ ಕೊಟ್ಟ; ದೂರ ಹೋಗಲು ಅವನು ಹೇಳಿದನಲ್ಲವೆ, ಆ ದೇವರು? ಅವನ ಮಾತನ್ನೂ ನೀನು ಕೇಳಬೇಕಿತ್ತಲ್ಲವೆ? ಅದನ್ನೇಕೆ ನೀನು ಯೋಚಿಸಲಿಲ್ಲ?' ಎಂದರು.

ಗುರುಗಳ ಈ ಮಾತನ್ನು ಕೇಳಿದ ಆ ಶಿಷ್ಯನಿಗೆ ಅವನ ತಪ್ಪಿನ ಅರಿವಾಯಿತು.

★★★

ಇದು ತುಂಬ ಪ್ರಸಿದ್ಧ ಕಥೆ. ತುಂಬ ಬಳಕೆಯಾಗಿರುವ ಕಥೆಯೂ ಹೌದು. ಆದರೆ, ಮತ್ತೆ ಮತ್ತೆ ಮೆಲುಕು ಹಾಕಬೇಕಾದ ಕಥೆಯಂತೂ ಹೌದೆನ್ನಿ!

ನಮಗೆ ಯಾರಾದರೊಬ್ಬರು ಇಷ್ಟ ಎಂದಾದರೆ ಅವರು ಏನು ಹೇಳಿದರೂ ಅದನ್ನು ನಿಜ ಎಂದೇ, ಅದೂ ವಾಚ್ಯದ ಮಟ್ಟದಲ್ಲಿಯೇ ಸ್ವೀಕರಿಸಿಬಿಡುತ್ತವೆ; ಅದೇ ನಮಗೆ ಇಷ್ಟವಾಗದಿರುವವರು ಏನು ಹೇಳಿದರೂ ಸಂಶಯದಿಂದಲೇ ನೋಡುತ್ತೇವೆ. ಸರಿ – ತಪ್ಪುಗಳ ತೂಗಿ ನೋಡಿ, ವಿಶ್ಲೇಷಣೆಯ ಜರಡಿಯಿಂದ ಪರಿಶೋಧಿಸಿ, ವಿವೇಕದ ಬೆಳಕಿನಲ್ಲಿ ಸಂಸ್ಕರಿಸಿದಾಗಲೇ ಅರಿವಿನ ನಿಜವಾದ ನೆಲೆ – ಬೆಲೆಗಳು ಸ್ಥಾಪಿತವಾಗುವುದು. ಅದರಲ್ಲೂ ತಾತ್ವಿಕ ವಿಷಯಗಳ ಬಗ್ಗೆ ಮಾತನಾಡುವಾಗ ಈ ಎಚ್ಚರಿಕೆ ಮತ್ತಷ್ಟು ಸೂಕ್ಷ್ಮವಾಗಬೇಕಾಗುತ್ತದೆ. ಹೀಗಾಗಿಯೇ ಭಾರತೀಯ ಜ್ಞಾನಪರಂಪರೆಯಲ್ಲಿ ಅಧ್ಯಯನದ ಸಂದರ್ಭದಲ್ಲಿ ಕಲಿಕಾವಿಧಾನದ ಮೂರು ಸ್ತರಗಳನ್ನು ನಿರ್ದೇಶಿಸಿದ್ದಾರೆ. ಶ್ರವಣ, ಮನನ ಮತ್ತು ನಿದಿಧ್ಯಾಸನ – ಇವೇ ಆ ಮೂರು ಹಂತಗಳು.

ಮೊದಲನೆಯ ಹಂತವೇ ಶ್ರವಣ; ಎಂದರೆ 'ಕೇಳುವುದು'. ನಾವು ಗುರುವಿನ ಮಾತನ್ನೋ ನಮ್ಮ ಹಿರಿಯರ ಮಾತನ್ನೋ ಕೇಳುವುದು 'ಶ್ರವಣ' ಎನಿಸಿಕೊಳ್ಳುತ್ತದೆ. ಪುಸ್ತಕದ ಓದು ಕೂಡ ಶ್ರವಣವೇ. ಆದರೆ, ಏನನ್ನು ಹೇಳುತ್ತಾರೋ ಅದನ್ನು ಗಮನವಿಟ್ಟು ಕೇಳಬೇಕು. ಹೀಗೆ ವಿಷಯದ ಮೊದಲ ಹಂತವನ್ನು ಏಕಾಗ್ರತೆಯಿಂದ ಗ್ರಹಿಸುವುದು ಶ್ರವಣ. ಆದರೆ, ಕೇಳಿದ ಮಾತ್ರಕ್ಕೆ ನಾವು ಸರಿಯಾಗಿ ಕೇಳಿದ್ದೇವೆ ಎಂದೂ ಭಾವಿಸಬೇಕಾಗಿಲ್ಲ; ಮಾತ್ರವಲ್ಲ, ನಾವು ಸರಿಯಾಗಿ ಕಿವಿಯಿಂದ ಕೇಳಿದ್ದರೂ ಅಥವಾ ಕಣ್ಣಿನಿಂದ ನೋಡಿದ್ದರೂ ಕೇಳಿದ್ದು/ಕಂಡಿದ್ದು ದಿಟ ಎಂದೂ ಅಲ್ಲ. 'ಶ್ರವಣ'ವಾದದ್ದನ್ನು ವಿಮರ್ಶೆಯ ನಿಕಷಕ್ಕೆ ಒಡ್ಡಬೇಕು. ಇದೇ 'ಮನನ.' ನಮ್ಮ ಅಂತರಂಗದಲ್ಲಿ ವಿಷಯವೊಂದನ್ನು ಕುರಿತು ಗಂಭೀರವಾಗಿಯೂ ಸೂಕ್ಷ್ಮವಾಗಿಯೂ